KACM010000612021

Presented on : 11-01-2021
Registered on : 11-01-2021

**IN THE COURT OF**
**PRL. DISTRICT AND SESSIONS JUDGE.CHIKMAGALUR**
**AT Chikmagalur,CHIKMAGALUR**
**(Presided Over by SHUBHA GOWDAR)**
**SC/2/2021**

Complainant(PROSECUTION):
State by Jayapura Police, Rept. by The Public Prosecutor, Chikkamagaluru.

**VERSUS**

Accused:
Sreeraj @ Annaiah S/o Dharmaiah, 26yrs, Coolie, R/o Matadagadde, Hedse Vlg., Koppa Taluk.

--------------------------------------------------------------------------------

APP for State Complainant}: The Public Prosecutor, Chikkamagaluru.,
Advocate for I.S. THEJASVI appearing for Sreeraj @ Annaiah

--------------------------------------------------------------------------------

**Offence punishable under : SEC.314. of INDIAN PENAL CODE,**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ಚಿಕ್ಕಮಗಳೂರು**

**S.C. No:2/2021**

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ | ಸುರೇಶ | ಪ್ರಾ.ಸಾ.- 01 |
| ತಂದೆಯ ಹೆಸರು | ಃ | ರಾಮಯ್ಯ | ಚಾ.ಸಾ.- 01 |
| ವಯಸ್ಸು | ಃ | 30 ವರ್ಷ | |
| ಉದ್ಯೋಗ | ಃ | ಕೂಲಿ ಕೆಲಸ | |
| ವಾಸ ಸ್ಥಳ | ಃ | ಮಠದ ಗದ್ದೆ, ಕೊಪ್ಪ ತಾಃ | |

**ದಿನಾಂಕಃ 05-09-2022**

**ಪ್ರಮಾಣ ವಚನ ಬೋಧಿಸಲಾಯಿತು.**

**ಃ ಮುಖ್ಯ ವಿಚಾರಣೆಃ ಮಾನ್ಯ ಪಿ.ಪಿ. ಯವರಿಂದಃ**

1. ನ್ಯಾಯಾಲಯದ ಮುಂದೆ ಇರುವ ಆರೋಪಿ ನನಗೆ ಗೊತ್ತು. ಶಾಂತ ನನ್ನ ಅಕ್ಕ, ಅವರಿಗೆ ಇಬ್ಬರು ಹೆಣ್ಣು ಮಕ್ಕಳು, ಅವರೆಂದರೆ ನಾಗರತ್ನ ಮತ್ತು ನಾಗಲಕ್ಷ್ಮಿ. ಅದೇ ಊರಿನಲ್ಲಿ ನಮ್ಮ ಮನೆ ಪಕ್ಕದಲ್ಲಿ ವಾಸ ಮಾಡುತ್ತಿದ್ದರು.

2. ದಿನಾಂಕಃ 12-02-2019 ರಂದು, ನಾಗರತ್ನ ಅವರು ಹೊಟ್ಟೆ ನೋವು ಎಂದು ಹೇಳಿದರು, ಕೊಪ್ಪ ಸರ್ಕಾರಿ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಹೊಟ್ಟೆ ನೋವು ಕಡಿಮೆ ಆಯಿತು, ಕಾರಣ ವಾಪಾಸು ಮನೆಗೆ ಕರೆ ತಂದೆವು.

3. ದಿನಾಂಕಃ 13-02-2019 ರಂದು ಬಂಡಿಗಡಿ ಸಮೀಪ ಇರುವ ಹೊಸೂರಿನ ದೇವಸ್ಥಾನಕ್ಕೆ ಹೋಗಿದ್ದೆವು, ಪೂಜೆ ಮುಗಿಸಿಕೊಂಡು ವಾಪಾಸು ಮನೆಗೆ ಬರುತ್ತಿರುವಾಗ ನಾಗರತ್ನಳಿಗೆ ಪುನಃ ಹೊಟ್ಟೆ ನೋವು ಆಯಿತು, ಅಲ್ಲಿಂದ ಕೊಪ್ಪದ ಸರ್ಕಾರಿ ಆಸ್ಪತ್ರೆಗೆ ಕರೆದೊಯ್ದೆ ವು, ಅಲ್ಲಿ ಔಷಧಿ ಕೊಟ್ಟರು, ಹೊಟ್ಟೆ ನೋವು ಕಡಿಮೆ ಆಯಿತು, ಅದೇ ದಿನ ಸಾಯಂಕಾಲ ವಾಪಾಸು ಮನೆಗೆ ಕರೆ ತಂದೆವು. ಮನೆಗೆ ಬಂದ ನಂತರ ಪುನಃ ಹೊಟ್ಟೆ ನೋವು ಎಂದು ಹೇಳಿದಳು.

4. ದಿನಾಂಕಃ 14-02-2019 ರಂದು ಬೆಳಿಗ್ಗೆ ನಾಗರತ್ನಳಿಗೆ ಬ್ಲೀಡಿಂಗ್ ಆಗುತ್ತಿತ್ತು, ಜಯಪುರದ ಸರ್ಕಾರಿ ಆಸ್ಪತ್ರೆಗೆ ಕರೆದೊಯ್ದೆವು, ಇಲ್ಲಿ ಆಗುವುದಿಲ್ಲ, ಕೊಪ್ಪಕ್ಕೆ ಕರೆದುಕೊಂಡು ಹೋಗಿ ಎಂದರು, ಅಲ್ಲಿಂದ ಕೊಪ್ಪ ಸರ್ಕಾರಿ ಆಸ್ಪತ್ರೆಗೆ ಕರೆದೊಯ್ದೆವು, ಸ್ಕ್ಯಾನಿಂಗ್ ಮಾಡಬೇಕೆಂದು ಹೇಳಿದರು ಕೊಪ್ಪ ಪ್ರಶಮನಿ ಆಸ್ಪತ್ರೆಯಲ್ಲಿ ಸ್ಕ್ಯಾನಿಂಗ್ ಮಾಡಿಸಿದೆವು, ಆಗ ನಮಗೆ ಗೊತ್ತಾಗಿದ್ದು ನಾಗರತ್ನ 3 ತಿಂಗಳ ಗರ್ಭಿಣಿ ಆಗಿದ್ದು ಗರ್ಭಪಾತ ಆಗಿದೆ ಎಂದು. ಒಂದು ದಿನ ಕೊಪ್ಪ ಆಸ್ಪತ್ರೆಯಲ್ಲೇ ಇದ್ದೆವು. ಬ್ಲಿಂಡಿಗ್ ಬಹಳ ಆಗುತ್ತಿತ್ತು, ಬಹಳ ಹೊಟ್ಟೆ ನೋವು ಇತ್ತು.

5. ಇಲ್ಲಿ ಆಗುವುದಿಲ್ಲ ಎಂದು ಹೇಳಿದರು ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ದಿನಾಂಕಃ 16-02-2019 ರಂದು ಕರೆದೊಯ್ದೆವು. ಮಗುವನ್ನು ತೆಗೆಯುವುದಕ್ಕೋಸ್ಕರ

ಟ್ಯಾಬ್ಲೆಟ್ ಕೊಟ್ಟಿದ್ದಾರೆ, ಗರ್ಭಪಾತ ಆಗಿದೆ, ಇಲ್ಲಿ ಮೆಡಿಸಿನ್ ಕೊಡುತ್ತೇವೆ, ನೋಡೋಣ ಎಂದು ಹೇಳಿದರು. ಆದರೆ ದಿನಾಂಕಃ 18-02-2019 ರ ಬೆಳಿಗ್ಗೆ ಅಲ್ಲೇ ನಾಗರತ್ನ ಮೃತಪಟ್ಟಳು.

6. 3 /4 ವರ್ಷಗಳಿಂದ ನಾಗರತ್ನ ಮತ್ತು ಆರೋಪಿ ಶ್ರೀರಾಜ್ ಪ್ರೀತಿ ಮಾಡುತ್ತಿದ್ದರೆಂದು, ಈ ಕಾರಣದಿಂದ ಆರೋಪಿಯಿಂದಲೇ ನಾಗರತ್ನ ಗರ್ಭಿಣಿ ಆಗಿದ್ದಳೆಂದು, ಎಲ್ಲರಿಗೂ ಗೊತ್ತಾಗುತ್ತದೆ ಎಂದು ಮಗು ಬೇಡ ಎಂದು ನಾಗರತ್ನಳಿಗೆ ಆರೋಪಿಯು ಗರ್ಭಪಾತ ಆಗಲೆಂದು ಟ್ಯಾಬ್ಲೆಟ್ ಕೊಟ್ಟಿದ್ದನೆಂದು ತಿಳಿದು ಬಂದಿತು, ಅದರಿಂದ ಹೊಟ್ಟೆ ನೋವು ಮತ್ತು ರಕ್ತ ಸ್ರಾವ ಉಂಟಾಗಿ ದಿನಾಂಕಃ 18-02-2019 ರಂದು ಬೆಳಿಗ್ಗೆ 5.30 ಗಂಟೆಗೆ ಮೃತಪಟ್ಟಳು.

7. ಆರೋಪಿಯು ಗರ್ಭಪಾತ ಆಗಲೆಂದು ಟ್ಯಾಬ್ಲೆಟ್ ಕೊಟ್ಟಿದ್ದರಿಂದ ನಾಗರತ್ನಳಿಗೆ ಗರ್ಭಪಾತ ಆಗಿ ನಾಗರತ್ನ ಮತ್ತು ಹೊಟ್ಟೆಯಲ್ಲಿದ್ದ ಮಗು ಮೃತಪಟ್ಟಿದ್ದು. ಆರೋಪಿಯೇ ಇದಕ್ಕೆಲ್ಲಾ ಕಾರಣ.

8. ದಿನಾಂಕಃ 18-02-2019 ರಂದೇ ನಾನು ಜಯಪುರ ಪೊಲೀಸ್ ಠಾಣೆಗೆ ಹೋಗಿ ಈಗ ನೋಡುತ್ತಿರುವ ದೂರನ್ನು ಆರೋಪಿಯ ವಿರುದ್ಧ ಕೊಟ್ಟೆನು, ಇದರಲ್ಲಿರುವ ಸಹಿ ನನ್ನದೇ, ಅವುಗಳನ್ನು ಕ್ರಮವಾಗಿ ನಿ.ಪಿ. 1 ಮತ್ತು 1(ಎ) ಎಂದು ಗುರುತಿಸಲಾಯಿತು. ನಂತರ ಪುನಃ ನಾನು ಶಿವಮೊಗ್ಗಕ್ಕೆ ಮೆಗ್ಗಾನ್ ಆಸ್ಪತ್ರೆಗೆ ಹೋದೆನು.

9. ಈಗ ಸಾಕ್ಷಿದಾರರಿಗೆ ಒಂದು ಫೋಟೋವನ್ನು ತೋರಿಸಲಾಗಿ ಅದರಲ್ಲಿ ಇರುವ ಶವ ನಾಗರತ್ನ ಅವರದ್ದು ಎಂದು ಸಾಕ್ಷಿದಾರರು ಗುರುತಿಸಿರುತ್ತಾರೆ, ಅದನ್ನು ನಿ.ಪಿ.2 ಎಂದು ಗುರುತಿಸಲಾಯಿತು. ಆ ಫೋಟೋದಲ್ಲಿ ನಾನು ಸಹಾ ಇದ್ದೇನೆ. ಈ ಫೋಟೋವನ್ನು ದಿನಾಂಕಃ19-02-2019 ರಂದು ಶವ ಪಂಚನಾಮೆ ಕಾಲಕ್ಕೆ ತೆಗೆದದ್ದು.

**ಪಾಟೀ ಸವಾಲುಃ ಆರೋಪಿ ಪರ ಃ ಶ್ರೀ ಐ.ಎಸ್.ಟಿ. ವಕೀಲರಿಂದಃ**

10. ನಾನು 7 ನೇ ತರಗತಿವರೆಗೆ ಓದಿದ್ದೇನೆ. ಆರೋಪಿಯ ಮನೆ ನಮ್ಮ ಮನೆಯಿಂದ ಸ್ವಲ್ಪ ದೂರದಲ್ಲಿ ಇದೆ. ನಾಗರತ್ನ ಮಂಗಳೂರಿನ ಬಂದರಿನಲ್ಲಿ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದಳು. ನನ್ನ ಬಳಿ, ನಾಗರತ್ನ ಬಳಿ ಮೊಬೈಲ್ ಫೋನ್‌ಗಳು ಇದ್ದವು. ಕೆಲಸ ಮಾಡುತ್ತಿದ್ದಾಗ ರಜೆ ಕೊಟ್ಟಾಗ ಜಯಪುರಕ್ಕೆ ಬರುತ್ತಿದ್ದಳು. ಫೋನಿನಲ್ಲಿ ನಮ್ಮೊಂದಿಗೆ ಯಾವಾಗಲೂ ಮಾತನಾಡುತ್ತಿದ್ದಳು.

11. ಘಟನೆ ನಡೆದಿದೆ ಅಂದರೆ ತೀರಿಕೊಂಡ ಸಮಯದಲ್ಲಿ ನಾಗರತ್ನ ರಜೆ ಹಾಕಿಕೊಂಡು ಬಂದಿದ್ದಳು. ಏಕೆ ರಜೆ ಹಾಕಿ ಬಂದಿದ್ದಳೆಂದು ಗೊತ್ತಿಲ್ಲ. ಪ್ರತೀ ವರ್ಷವೂ ಫೆಬ್ರವರಿ ತಿಂಗಳಿನಲ್ಲಿ ಪಂಜುರ್ಲಿಯ ನಾಗಬ್ರಹ್ಮ ದೇವಸ್ಥಾನಕ್ಕೆ ಹೋಗುತ್ತಿದ್ದೆವು ಎನ್ನುವುದು ಸರಿ. ಎಲ್ಲಿದ್ದರೂ ಆ ಸಮಯಕ್ಕೆ ಪ್ರತೀ ವರ್ಷವೂ ನಾಗರತ್ನಕ್ಕೆ ದೇವಸ್ಥಾನಕ್ಕೆಂದು ಬರುತ್ತಿದ್ದಳು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ಅದೇ ಸಾರಿ ಮೊದಲ ವರ್ಷ ಬಂದದ್ದು ಎಂದು ಹೇಳಿರುತ್ತಾರೆ.

12. ಮಂಗಳೂರಿನಲ್ಲಿ ರೂಮ್ ಮಾಡಿಕೊಂಡು ನಾಗರತ್ನ ವಾಸ ಮಾಡುತ್ತಿದ್ದಳು. ನಾನು ಒಂದು ಸಾರಿ ಮಾತ್ರ ಮಂಗಳೂರಿಗೆ ಆ ರೂಮ್ ಗೆ ಹೋಗಿದ್ದೆನು. ನಾಗರತ್ನ ಅವರ ಅಲ್ಲಿನ ಸ್ನೇಹಿತರು ಯಾರು, ಯಾರೊಂದಿಗೆ ಬೆರೆಯುತ್ತಿದ್ದಳು ಈ ಬಗ್ಗೆ ನನಗೇನು ಮಾಹಿತಿ ಇಲ್ಲ. ನಿ.ಪಿ.1 ರ ದೂರಿನಲ್ಲಿ, ನನ್ನ ಅಕ್ಕನಿಂದ ವಿಷಯ ತಿಳಿಯಿತು ಎಂದು ಅದರಲ್ಲಿ ಕಾಣಿಸಿದ್ದೇನೆ ಎನ್ನುವುದು ಸರಿ. ವೈಯುಕ್ತಿಕವಾಗಿ ನನಗೆ ಈ ಎಲ್ಲಾ ವಿಷಯಗಳ ಬಗ್ಗೆ ಮಾಹಿತಿ ಗೊತ್ತಿಲ್ಲ. ಈ ಎಲ್ಲಾ ವಿಷಯಗಳು ನಾಗರತ್ನ ಸತ್ತ ನಂತರವೇ ನಿಮ್ಮ ಅಕ್ಕನಿಂದ ನಿಮಗೆ ಗೊತ್ತಾಗಿದ್ದಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ವೈದ್ಯರು ಹೇಳಿದಾಗ ನಾಗರತ್ನ ಗರ್ಭಿಣಿ ಆದ ಬಗ್ಗೆ ಗರ್ಭಪಾತ ಆಗಿದೆ ಎನ್ನುವ ಬಗ್ಗೆ ಗೊತ್ತಾಯಿತು ಎಂದು, ಉಳಿದ ವಿಷಯ ನಾಗರತ್ನ ಸತ್ತ ನಂತರ ಗೊತ್ತಾಯಿತು ಎಂದು ಹೇಳಿರುತ್ತಾರೆ.

13. ಡಾಕ್ಟರೇನಾದರೂ ನಿಮಗೆ, ಯಾವಾಗ ಟ್ಯಾಬ್ಲೆಟನ್ನು ನಾಗರತ್ನಳಿಗೆ ಕೊಟ್ಟಿದ್ದಾರೆ ಎಂದು ಹೇಳಿದ್ದರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ಹೌದು ಎಂದು 4 ಗಂಟೆ ಮೊದಲೇ ಕೊಟ್ಟಿದ್ದಾರೆ ಎಂದು ಹೇಳಿದ್ದರು ಎಂದು ಹೇಳಿರುತ್ತಾರೆ. ಯಾವ ಟ್ಯಾಬ್ಲೆಟ್ ಕೊಟ್ಟಿದ್ದಾರೆ ಎಂದೇನು ಟ್ಯಾಬ್ಲೆಟ್ ಹೆಸರಿನ ಬಗ್ಗೆ ಹೇಳಿಲ್ಲ. ಯಾವ ಡಾಕ್ಟರ್, ಯಾವ ದಿನಾಂಕ, ಎಷ್ಟು ಗಂಟೆಗೆ ಹೇಳಿದರು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ಕೊಪ್ಪದ ಪ್ರಶಮನಿ ಆಸ್ಪತ್ರೆಯ ಡಾಕ್ಟರ್ ಇದನ್ನು ದಿನಾಂಕಃ14-02-2019 ರಂದು ಹೇಳಿದ್ದು ಎಂದು ಹೇಳಿರುತ್ತಾರೆ. ಈ ರೀತಿ ಡಾಕ್ಟರ್ ಹೇಳಿದ್ದಾರೆ ಎಂದು ದೂರಿನಲ್ಲೇನು ಕಾಣಿಸಿಲ್ಲ.

14. ಆರೋಪಿಯೇ ಅದಕ್ಕೆ ಕಾರಣ ಎಂದು ಡಾಕ್ಟರ್ ಗೆ ಹೇಳಿ ಆಸ್ಪತ್ರೆಯಲ್ಲೇನು ಬರೆಯಿಸಿಲ್ಲ. ನಾಗರತ್ನಳ ಹೇಳಿಕೆಯನ್ನು, ಅವರು ತೀರಿ ಹೋಗುವುದಕ್ಕಿಂತ ಮೊದಲು ಯಾರಾದರೂ ಪಡೆದುಕೊಂಡರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ನಾಗರತ್ನಳು ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ ಎಂದು, ಆಕೆಯ ಹೇಳಿಕೆಯನ್ನು ಯಾರೂ ಪಡೆದಿಲ್ಲ ಎಂದು ಹೇಳಿರುತ್ತಾರೆ. ಆಕೆ ಸೀರಿಯಸ್ ಆಗಿದ್ದಳು ಎಂದು ಹೇಳಿದಿರಿ, ನೀವುಗಳೂ ಸಹಾ ಆಕೆಯಿಂದ ಯಾವ ವಿಚಾರವನ್ನು ಕೇಳಿ ತಿಳಿದುಕೊಂಡಿಲ್ಲ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ಹೌದು ಎಂದು ಹೇಳಿರುತ್ತಾರೆ.

15. ಆರೋಪಿಯ ಮನೆಯವರಿಗೂ ಮತ್ತು ನಿಮ್ಮ ಮನೆಯವರಿಗೂ ಬಹಳ ವರ್ಷಗಳಿಂದ ಮಾತು ಕತೆ ಇಲ್ಲ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ಹಾಗೇನು ಇಲ್ಲ ಎಂದು ಹೇಳಿರುತ್ತಾರೆ. ಈ ಘಟನೆ ನಡೆದಿದೆ ಎಂದು ಹೇಳಲಾದ ಮೊದಲು ಆರೋಪಿಗೂ ಮತ್ತು ನಿಮ್ಮ ಅಕ್ಕ ಭಾವನಿಗೂ ಗಲಾಟೆ ಆಗಿತ್ತು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ಆಗಿರಬಹುದು, ಆದರೆ ಮಾತುಕತೆ ಇತ್ತು ಎಂದು ಹೇಳಿರುತ್ತಾರೆ.

16. ನಾಗರತ್ನಳ ಮೊಬೈಲನ್ನು ನಾವೇನು ಚೆಕ್ ಮಾಡಲಿಲ್ಲ, ಅದನ್ನು ಪೊಲೀಸರು ತೆಗೆದುಕೊಂಡರು. ನಾಗರತ್ನ ಮತ್ತು ಆರೋಪಿ ಇಬ್ಬರೂ ಪ್ರೀತಿ

ಮಾಡುತ್ತಿದ್ದರು ಎನ್ನುವ ಬಗ್ಗೆ ನಿಮ್ಮ ಬಳಿ ಯಾವ ಸಾಕ್ಷ್ಯವೂ ಇಲ್ಲ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ಮೊಬೈಲ್ ನಲ್ಲಿ ಮೆಸೇಜ್ ಗಳು ಇವೆ ಎಂದು, ಆ ಮೊಬೈಲನ್ನು ಪೊಲೀಸ್ ಠಾಣೆಗೆ ಕೊಟ್ಟಿದೆ ಎಂದು ಹೇಳಿರುತ್ತಾರೆ. ಆ ಮೆಸೇಜ್ ಯಾವ ತರಹದ್ದು ಎಂದು ಹೇಳಲಾಗುತ್ತದೆಯೇ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ನಾನೇನು ಓಪನ್ ಮಾಡಿಲ್ಲ ಎಂದು ಹೇಳಿರುತ್ತಾರೆ.

17. ನಿಮ್ಮ ಅಕ್ಕ, ಭಾವ ಮತ್ತು ಆರೋಪಿಯ ಮಧ್ಯೆ ಇದ್ದ ವೈಷಮ್ಯದಿಂದ ನಾಗರತ್ನ ಮೃತಪಟ್ಟ ಪ್ರಕರಣವಾದ ದುರ್ಲಾಭ ಪಡೆದು ಸುಳ್ಳು ದೂರನ್ನು ಆರೋಪಿ ವಿರುದ್ಧ ಕೊಡಲಾಗಿದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ವೈಷಮ್ಯವೇನು ಇಲ್ಲ ಎಂದು, ಸುಳ್ಳು ಎಂದು ಹೇಳಿರುತ್ತಾರೆ. ನಾಗರತ್ನ ಅವರು ಗರ್ಭಿಣಿ ಆಗಿರುವುದಕ್ಕೂ, ಗರ್ಭಪಾತ ಆಗಿದ್ದಕ್ಕೂ, ಆಕೆ ಮೃತಪಟ್ಟಿದ್ದಕ್ಕೂ ಮತ್ತು ಆರೋಪಿಗೂ ಯಾವ ಸಂಬಂಧವೂ ಇಲ್ಲ ಎನ್ನುವುದು ಸರಿಯಲ್ಲ. ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

**ಓ.ಹೇ.ಕೇ.ಸ.ಇ.ಎ.ಒ.**

**Sd/-05-09-2022**
**(ಶುಭ ಗೌಡರ್)**
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಚಿಕ್ಕಮಗಳೂರು.**

ಸಾಕ್ಷಿ ಸಹಿ:-
ಚ

Visit **ecourts.gov.in** for updates or download mobile app "**eCourts Services**" from Android or iOS